| Sl. No. | Name of Village | Taluk | District | Date of Electrification |
|---|---|---|---|---|
| | | 1949-50 | | |
| 35 | Nandagudi ... | Hoskote ... | Kolar ... | 4—7—49 |
| 36 | Ramasagara ... | Banga-pet ... | Do ... | 13—7—49 |
| 37 | Santhehalli ... | Do ... | Do ... | 14—10—40 |
| 38 | Kamasaramudram ... | Do ... | Do ... | 9—12—49 |
| 39 | Kudenur ... | Do ... | Do ... | 11—12—49 |
| 40 | Myalardahalli ... | Do ... | Do ... | Do |
| 41 | Channakal ... | Do | Do ... | Do |
| 42 | Ittamadu ... | Ramanagaram ... | Bangalore ... | 1—8—49 |
| 43 | Avathi ... | Devanahalli ... | Do ... | 4—8—49 |
| 44 | Gundopanthapalya ... | Bangalore South ... | Do ... | 19—8—49 |
| 45 | Kudalur ... | Channapatna ... | Do ... | 18—11—49 |
| 46 | Anneswara ... | Devanahalli ... | Do ... | 21—12—49 |
| 47 | Chowkanahally ... | Ramanagaram ... | Do ... | 19—1—50 |
| 48 | Makanahally palya ... | Tumkur ... | Tumkur ... | 11—7—49 |
| 49 | Sosale ... | T.-Narsipur ... | Mysore ... | 19—3—50 |
| 50 | Gopalapura ... | Mandya ... | Mandya ... | 18—9—40 |
| 51 | Rampura ... | Maddur ... | Do ... | 27—1—50 |
| 52 | Hanumanthapur ... | Do ... | Do ... | 24—3—50 |
| 53 | Alur ... | Do ... | Do ... | 23—3—50 |
| 54 | Chellakere ... | Chellakere ... | Chitaldrug ... | 19—10—40 |
| 55 | Bethur ... | Davangere ... | Do ... | 22—10—49 |
| 56 | Shanthigrama ... | Hassan ... | Hassan ... | 3—8—49 |
| 57 | Arehalli ... | Belur ... | Do ... | 19—11—49 |
| 58 | Kantarajpura ... | Channarayapatna ... | Do .. | 22—10—49 |
| 59 | Auggunda ... | Arsikere ... | Do ... | 29—1—50 |
| 60 | Tangli ... | Kadur ... | Do ... | 16—2—50 |
| 61 | Thayagarathi ... | Sagar ... | Shimoga ... | 10—7—50 |
| 62 | Nyamathi ... | Honnali ... | Do ... | 15—8—49 |
| 63 | Billahalli ... | Channagiri ... | Do ... | 13—11—49 |
| 64 | Busenhalli ... | Do ... | Do ... | 11—11—49 |
| 65 | Haranahally ... | Kumsi ... | Do ... | 18—12—49 |
| 66 | Kumsi ... | Shimoga ... | Do ... | 20—12—49 |
| 67 | Keladi ... | Sagar ... | Do ... | 8—1—50 |
| 68 | Ayanur ... | Kumsi ... | Do ... | 6—3—50 |
| 69 | Honnali ... | Honnali ... | Do ... | 13—3—50 |
| 70 | Horagoppa ... | Sagar ... | Do ... | 14—3—50 |
| 71 | Bandegadde ... | Do ... | Do ... | 14—3—50 |

## Industrial Loans to Private Individuals for the last three years.

Q.—21. **Sri H. M. MALLIKARJUNAPPA** (Chikmagalur District—General).—

Will the Government be pleased to state:—

the amount of industrial loans given to the private individuals in the years 1947-48, 1948-49 and 1949-50?

A.—**Sri H. C. DASAPPA** (Minister for Finance and Industries).—

| | | |
|---|---|---|
| 1947-48 | ... | Rs. 42,090. |
| 1948-49 | ... | Rs. 16,000. |
| 1949-50 | ... | Rs. 57,050. |

## Request for presenting the Public Accounts Committee reports before the House

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗಾ ಜಿಲ್ಲೆ).— ಸ್ವಾಮಿ, ಈ ಸಭೆಯ ಕಾರ್ಯಕಲಾಪಗಳಿಗೆ ಸಂಬಂಧ ಪಟ್ಟ ಒಂದೆರಡು ಅಂಶಗಳನ್ನು ನಾನು ಈ ಸಭೆಯ ಗಮನಕ್ಕೆ ತರಬೇಕೆಂದು ನನ್ನ ಅಭಿಲಾಷೆ ಇದೆ. ಕಳೆದ ಬಡ್ಜೆಟ್ ಅಧಿವೇಶನದಲ್ಲಿ ನಾನು ಆಗ ಈ ಸಭೆಯ ಗಮನಕ್ಕೆ ಒಂದು ಅಂಶವನ್ನು ತೆಗೆದುಕೊಂಡು ಬಂದಿದ್ದೆ. ಅದೇನೆಂದರೆ Under rule 76 of the Mysore Legislative Assembly Rules it is obligatory on the part of the Government to present to the Assembly the report of the Committee on Public Accounts.

The rule reads like this:

"The report of the Committee on Public Accounts on the accounts of the Government and the report of the audit officer thereon shall be presented to the Assembly by the Chairman of the said Committee."

So far as the Centre is concerned, the Parliament and so far as the States are concerned the Legislature of the State are the supreme authorities in financial matters.

ಆಗ ಅವರು ಅದನ್ನು ಮಾಡಲಿಲ್ಲ. ಆ ರೀತಿ ಮಾಡುವುದಕ್ಕೆ ಆ ವರ್ಷ ವಿಶೇಷ ತೊಂದರೆಗಳಿದ್ದವು. ಯಾವಾಗಲೂ ಜೂನ್ ತಿಂಗಳಿನಲ್ಲಿ ನಡೆಯುತ್ತಾ ಇದ್ದ ಅಧಿವೇಶನ ಮಾರ್ಚಿಯಲ್ಲಿ ನಡೆದದ್ದರಿಂದ ಮೂರು ತಿಂಗಳು ಹಿಂದಕ್ಕೆ ಹಾಕಬೇಕಾಯಿತು. ಆದ್ದರಿಂದ ಆಕೌಂಟ್ಸ್ ಕೂಡ ತಯಾರಾಗಿಲ್ಲ, ತಯಾರಾಗಿದ್ದರೂ ಅದಕ್ಕೆ ಸಂಬಂಧಪಟ್ಟ ಯಾವ ಆಫೀಸರುಗಳ Explanation ತರಿಸಬೇಕಾಗಿತ್ತೋ ಅದನ್ನು ತರಿಸಲಾಗಲಿಲ್ಲವಾದ್ದರಿಂದ ಮುಂದೆ ಅಸೆಂಬ್ಲಿ ಮೇ ತಿಂಗಳಿನಲ್ಲಿ ಸೇರುತ್ತದೆ ಆಗ ಕಡ್ಡಾಯವಾಗಿ ತಪ್ಪದೇ ಸಭೆಯ ಮುಂದಿಡುತ್ತೇವೆ ಎಂದು ಆಗ ಹಣಕಾಸಿನ ಸಚಿವರು ಭರವಸೆ ಕೊಟ್ಟಿದ್ದರು. A healthy tradition and the previous practice has been to present it at the time of presenting the Budget.

**Sri K. CHENGALARAYA REDDY** (Chief Minister).—Is the Hon'ble Member referring to rule 76?

**Sri L. SIDDAPPA.**—Yes. I am also referring to the promise made by the Hon'ble Finance Minister in the previous session of the Assembly.

ಇದನ್ನೆಲ್ಲಾ ನೋಡಿದರೆ ಸರ್ಕಾರದವರು ಈ ಸಭೆಯ ವಿಷಯದಲ್ಲಿ ತೋರಿಸುತ್ತಿರುವ ಮನೋಭಾವನೆ ಎಷ್ಟು ತಾತ್ಸಾರದಿಂದ ಕೂಡಿದೆ. ಹೇಗೆ ಅಗೌರವವನ್ನುಂಟು ಮಾಡುವಂತೆ ಕಾಣುತ್ತದೆಂಬುದು ಅರ್ಥವಾಗುತ್ತದೆ. ಏನೋ ಹೆಚ್ಚಿನ ಬಹುಮತವಿಟ್ಟುಕೊಂಡು ಯಾವ ತೆರದ ಸೂಚನೆ ಸಭೆಯ ಮುಂದೆ ತಂದರೂ ನೀಗಿಸಬಲ್ಲೆವೆಂದು ಹೇಳಿಕೊಳ್ಳಬಹುದು. ಆ ಭಾವನೆ ತಮಗಿರುವುದಾದರೆ ತಾವು ಹೇಗಬೇಕಾದರೂ ಮಾಡಿಕೊಳ್ಳಬಹುದು. ಆದರೆ ಈ ಸಭೆಯ ನಾಯಕರು ನಾವಿಲ್ಲಿ ಪಾರ್ಲಿಮೆಂಟಿನ ಪದ್ಧತಿಗಳನ್ನು ಜಾರಿಗೆ ತರಬೇಕು, ಇದರ ಜವಾಬ್ದಾರಿ ಮಂತ್ರಿಗಳ ಮೇಲೆ ಮಾತ್ರವೇ ಇಲ್ಲ; ವಿರೋಧಪಕ್ಷದವರೂ ಕೂಡ ಸಹಾಯ ಮಾಡಬೇಕು ಎಂದು ಆಗಾಗ್ಗೆ ಹೇಳುತ್ತಿರುತ್ತಾರೆ, ಇದಕ್ಕೆ ಉತ್ತರವಾಗಿ ನಾನು ತಮಗೆ ತಿಳಿಸಬೇಕಾಗಿದೆ; ನೀವುಗಳು ಹೀಗೆ ಬುದ್ಧಿವಾದಗಳನ್ನು ಮಾತ್ರ ಹೇಳುವುದಲ್ಲ, ನೀವು ಹೇಳಿದಂತೆ ನೀವೇ ಕಾರ್ಯಾಚರಣೆಯಲ್ಲಿ ಮಾಡಿ ತೋರಿಸುವುದನ್ನು ತಿಳಿದುಕೊಳ್ಳಬೇಕು. ಆ ದೃಷ್ಟಿಯಿಂದ ನಾನಿದನ್ನು ಹೇಳುತ್ತಿದ್ದೇನೆ ಅಷ್ಟೆ. ಆದ್ದರಿಂದ ಈ ರೀತಿಯಾಗಿ ಸಭೆಯನ್ನು ತಾತ್ಸಾರದೃಷ್ಟಿಯಿಂದ ನೋಡುವುದಾದರೆ ನಮ್ಮ ಸಭೆಯಲ್ಲಿ ಪಾರ್ಲಿಮೆಂಟ್ ನಡೆವಳಿಕೆಗಳನ್ನು ಜಾರಿಗೆ ತರುವುದರಲ್ಲಿ ಯಾರ ಸಹಕಾರವೂ ದೊರಕುವುದಿಲ್ಲವೆಂದು ಹೇಳಬೇಕಾಗಿದೆ.

*ಶ್ರೀ ಕೆ. ಚೆಂಗಲರಾಯರೆಡ್ಡಿಯವರು (ಮುಖ್ಯ ಮಂತ್ರಿಯವರು).—ಮಾನ್ಯ ಸಿದ್ದಪ್ಪನವರು ಬಹಳ ವಿನಯದಿಂದಲೂ ಮತ್ತು ವಿಷಾದದಿಂದಲೂ ಈ ವಿಷಯವನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಕೊನೆ ಕೊನೆಗೆ ಸ್ವಲ್ಪ ಕಠಿಣವಾಗಿಯೂ ಮಾತನಾಡಿದರು. ವಿಷಯವೇನೋ ಅದರಬಗ್ಗೆ ವಿವರಣೆಯನ್ನು ಕೇಳಿದ್ದರೆ ಸಾಕಾಗಿತ್ತು. ಅದು ಬಿಟ್ಟು ಈ ಸಭೆಯ ವಿಷಯದಲ್ಲಿ ತಾತ್ಸಾರ ಮನೋಭಾವನೆಯಿದೆ, ಅದನ್ನು ಅಗೌರವದಿಂದ ಕಾಣುತ್ತಿದ್ದೇವೆ ಎಂದೆಲ್ಲಾ ಆಪಾದಿಸಿದ್ದು ಖಂಡಿತವಾಗಿಯೂ ಅಪ್ರಕೃತ ಮತ್ತು ಅನುಚಿತವೆಂದು ಹೇಳದೆ ವಿಧಿಯಿಲ್ಲ. ಸರ್ಕಾರದವರು ಈ ಸಭೆಯ ವಿಚಾರದಲ್ಲಿ ಎಂದೂ ಯಾವ ರೀತಿಯ ತಾತ್ಸಾರ ಮನೋಭಾವನೆಯನ್ನೂ ಇಟ್ಟುಕೊಂಡಿಲ್ಲ. ಆದರೂ ಈ ರೀತಿಯಲ್ಲಿ ಮಾನ್ಯ ಸದಸ್ಯರಿಗೆ ಇಷ್ಟೊಂದು inferiority complex ಇದ್ದರೆ ಅದಕ್ಕೆ ನಾನೇನೂ ಹೇಳಲಾರೆ. ಈ ಮಾನ್ಯ ಸಭೆಗೆ ನಾವು ಸಂಪೂರ್ಣ ಗೌರವ ಕೊಡುತ್ತಿದ್ದೇವೆ ಮತ್ತು ಯಾವ ಸಂದರ್ಭದಲ್ಲೂ ತಾತ್ಸಾರ ಮನೋಭಾವನೆಯನ್ನು ತೋರ್ಪಡಿಸಲು ಪ್ರಯತ್ನಪಟ್ಟಿಲ್ಲ. ಮತ್ತು ಪ್ರಯತ್ನಪಡುವುದೂ ಇಲ್ಲ. ಆದ್ದರಿಂದ ಏನೋ ಊಹೆಗಳ ಮೇಲೆ ಗಾಳಿಗೋಪುರಗಳನ್ನು ಕಟ್ಟಿಕೊಂಡು ಅದರ ಮೇಲೆ ಮುಂದು ವರಿಯುವುದಕ್ಕೆ ಹೊರಡುವುದು ಸೂಕ್ತವಲ್ಲವೆಂದು ಅನುಭವಶಾಲಿಗಳಾದ ಶ್ರೀಮಾನ್ ಸಿದ್ದಪ್ಪನವರ ಗಮನಕ್ಕೆ ವಿನಯದಿಂದ ತರಬಯಸುತ್ತೇನೆ.

ಇನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಯ ವಿಚಾರ ಹೇಳುತ್ತೇನೆ. ಮಾನ್ಯ ಆರ್ಥಿಕ ಸಚಿವರು ಈ ವರದಿಯನ್ನು 'ಮುಂದಿನ ಅಧಿವೇಶನದಲ್ಲಿ ಇಡುತ್ತೇವೆ' ಎಂದು ಹೇಳಿದ್ದು ನಿಜ. ಅಂದ ಮಾತ್ರಕ್ಕೆ ಮುಂದೆ ಬರತಕ್ಕ ಮೊದಲನೆಯ ಅಧಿವೇಶನದಲ್ಲೇ ಇಡಬೇಕೆಂದು ಕಾನೂನಿನಲ್ಲಿ ವಿಧಾಯಕ ಮಾಡಿಲ್ಲ. ಅನುಕೂಲವಾದಷ್ಟುಮಟ್ಟಿಗೆ ಎಷ್ಟು ಬೇಗ ಕೊಡುವುದಕ್ಕೆ ಸಾಧ್ಯವೋ ಅಷ್ಟುಬೇಗ ಒದಗಿಸಿಕೊಡಬಹುದೆಂದು ಅರ್ಥ ಮಾಡುವುದಕ್ಕೆ ಅವಕಾಶವಿದೆ. ಇಲ್ಲಿ 76ನೆಯ ನಿಷ್ಕರ್ಷನಿನಲ್ಲಿ ಈ ರೀತಿಯಿದೆ:

"The report of the Committee on Public Accounts on the accounts of the Government and the report of the audit officer thereon shall be presented to the Assembly by the Chairman of the said Committee."

ಅಂದರೆ ಯಾವಾಗ ಕೊಡಬೇಕೆಂದು ನಿರ್ದಿಷ್ಟವಾಗಿಲ್ಲ. ಆದರೂ ಆದಷ್ಟು ಜಾಗ್ರತೆ ಕೊಡಬೇಕೆಂಬುದನ್ನು ಒಪ್ಪುತ್ತೇನೆ. ಅದರಲ್ಲೇನೂ ಭಿನ್ನಾಭಿಪ್ರಾಯವಿಲ್ಲ. ಈಗತಾನೆ ರಿಪೋರ್ಟ್ ಮುದ್ರಿತವಾಗಿ ಬಂದಿದೆ. ಮೊದಲು ಈ ಅಧಿವೇಶನದಲ್ಲೇ ಸಭೆಯ ಮುಂದಿಡಬೇಕೆಂದು ಆಲೋಚನೆ ಮಾಡಿದ್ದೆವು. ಆದರೆ ವರದಿ ತಯಾರಾಗಿದ್ದರೂ ಅದನ್ನು ಮುದ್ರಿಸಿ ಅಜೆಂಡಾದಲ್ಲಿ ಸೇರಿಸುವುದಕ್ಕೆ ಸಾಕಾದಷ್ಟು ಕಾರಾವಕಾಶವಿಲ್ಲದೆ ಹೋಗಿ ಮಾಡಲಾಗಲಿಲ್ಲ. ಇಷ್ಟೇ ಹೊರತು ಬೇರಾವ ಮನೋಭಾವನೆಯಿಂದಲೂ ಅಲ್ಲ. ಮುಂದಿನ ಅಧಿವೇಶನದಲ್ಲಿ ಸಭೆಯ ಮುಂದಿಡುತ್ತೇವೆಂಬ ಭರವಸೆ ಕೊಡಬಲ್ಲೆ.